# ಸ್ವೀಕಾರ

...ಸಾಮಾಜಿಕ ಕಾದಂಬರಿ

■ ವಿವೇಕಾನಂದ ಕಾಮತ್

## ನೆಲೆಯೂರಿದ ಭಿಕ್ಷುಕ

ಅವನನ್ನು ನೋಡಲೇ ತನಗೆ ಭಯವಾಗುತ್ತದೆ..! ಕಂಗಳಲ್ಲಿ ಎಷ್ಟೊಂದು ವ್ಯಗ್ರತೆ ಇದೆ..! ಹಲ್ಲು ಕಚ್ಚಿ ರೋಷತಪ್ತನಾಗಿಯೇ ಮಾತನಾಡುತ್ತಾನೆ..ಹಿರಿಯರೆಂದರೆ ಗೌರವ, ಭಯ ಭಕ್ತಿಯೇ ಇಲ್ಲ.. ರಾಯರ ವ್ಯಕ್ತಿತ್ವ ಅವನಲ್ಲಿ ಕಿಂಚಿತ್ತೂ ಪ್ರಭಾವ ಬೀರುವುದಿಲ್ಲ..! ಬೀದಿಯಲ್ಲಿನ ಕೊಳಕನ್ನು ವಿಜಯಮ್ಮ ಮನೆಗೇಕೆ ತರಬೇಕು..? ಮನೆಯ ವಾತಾವರಣ ತಮ್ಮ ದಾಂಪತ್ಯ ಜೀವನ ಪಣಕ್ಕೊಡ್ಡಿದಂತಾಗುವುದು ಎಂಬ ಅರಿವು ಆಕೆಗಿಲ್ಲವೇ..? ಅಷ್ಟಾಗಿಯೂ ಆತನ ಬಗೆಗಿನ ವ್ಯಾಮೋಹ ವಿಜಯಮ್ಮನನ್ನೇಕೆ ಕುರುಡು ಮಾಡಬೇಕು..? ರಾಯರಿಗಿಂತಲೂ ವಿಜಯಮ್ಮನಿಗೆ ಈತನೇಕೆ ಪ್ರಮುಖನಾಗಬೇಕು..? ಅದೂ ಬೀದಿಯಲ್ಲಿರುವವನು.. ವಿಜಯಮ್ಮನಿಗೇಕೆ ಈ ಸೆಳೆತ..? ಒಂದಂತೂ ನಿಖರವೇನೆಂದರೆ, ಅವನು ಯಾರೆಂದು ಈ ದಂಪತಿಗೆ ಮತ್ತು ಈ ದಂಪತಿಯ ಬಗ್ಗೆ ಅವನಿಗೆ ಹಳೆಯ ಪರಿಚಯವಿದೆ..ಆ ಪರಿಚಯದ

